**CC No. 429/2014**
PW-7

**ದಿನಾಂಕಃ 06-02-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟೀ ಸವಾಲುಃ ಆರೋಪಿ ಪರ Sri.ACD ವಕೀಲರಿಂದಃ</u>**

ನಾನು ಕೆನರಾ ಬ್ಯಾಂಕಿನಲ್ಲಿ ಕರ್ತವ್ಯ ನಿರ್ವಹಿಸಿದ್ದೇನೆ. ನಾನು 1972 ರಲ್ಲಿ ಬ್ಯಾಂಕಿನ ಸಿಬ್ಬಂದಿಯಾಗಿ ಕೆಲಸಕ್ಕೆ ಸೇರಿದ್ದು, 1996 ರಲ್ಲಿ ನಿವೃತ್ತಿ ಹೊಂದಿರುತ್ತೇನೆ. ನಾನು ಬಲಭೀಮ ವಿದ್ಯಾಪ್ರಸಾರಕ ಸಮೀತಿ ಕುಲಗೋಡ ಈ ಸಂಸ್ಥೆಯ ನಿರ್ದೇಶಕನಾಗಿರುತ್ತೇನೆ. ನಾನು ಬಲಭೀಮ ವಿದ್ಯಾಪ್ರಸಾರಕ ಸಮೀತಿ ಕುಲಗೋಡ ಈ ಸಂಸ್ಥೆಯ ಚೇರಮನ ಮತ್ತು ವೈಸ ಚೇರಮನ ನನ್ನ ಹತ್ತಿರದ ಸಂಬಂಧಿಕರು ಎಂದರೆ ಸರಿ. ಪ್ರಸ್ತುತ ಪ್ರಕರಣಕ್ಕೆ ಸಂಬಂಧಿಸಿದಂತೆ ದೂರು ಸಲ್ಲಿಸಲು ನಾನು, ಚೇರಮನ, ವೈಸ ಚೇರಮನ, ಕಿರಿಯೂರು ಶಂಕರಗೌಡ ಮತ್ತು ಸಂಸ್ಥೆಯ ಸೆಕ್ರೆಟರಿ ಠಾಣೆಗೆ ಹೋಗಿರುತ್ತೇವೆ, ಆದರೆ ನಿರ್ದಿಷ್ಟ ದಿನಾಂಕ

ಹೇಳಲಾಗುವುದಿಲ್ಲ. ಪ್ರಸ್ತುತ ಪ್ರಕರಣಕ್ಕೆ ಸಂಬಂಧಿಸಿದಂತೆ ನಾನು ಒಂದು ಸಲ ಠಾಣೆಗೆ ಹೋಗಿರುತ್ತೇನೆ. ಹಾಗೇ ಒಂದು ಸಲ ಠಾಣೆಗೆ ಹೋಗಿ ಬಂದ ನಂತರ ನನ್ನ ಸಾಕ್ಷಿ ಮುಖ್ಯ ವಿಚಾರಣೆಯ ಸಮಯದಲ್ಲಿ 2 ನೇ ಬಾರಿಗೆ ಪೊಲೀಸರನ್ನು ಭೇಟಿಯಾಗುತ್ತಿದ್ದೇನೆಂದರೆ ಸರಿ.

ನಾವು ನಮ್ಮ ಸಂಸ್ಥೆಯ ಅಡಿಟನ್ನು ಧಾರವಾಡದಲ್ಲಿ ಮಾಡಿಸಿರುತ್ತೇವೆ. ನಮ್ಮ ಸಂಸ್ಥೆಯ ಎಲ್ಲ ರೆಜಿಷ್ಟರಗಳು ಆ ಸಮಯದಲ್ಲಿ ನಮ್ಮ ಕೆಳಕರ ವಿದ್ಯಾಸಂಸ್ಥೆಯಲ್ಲಿದ್ದವು ಎಂದರೆ ಸರಿ. ನಾವು 2010 ರ ಸಂಸ್ಥೆಯ ಅಡಿಟನ್ನು ಧಾರವಾಡದಲ್ಲಿ ಮಾಡಿಸಲು ಸಂಸ್ಥೆಯ ಚೇರಮನ ಮತ್ತು ವೈಸ್ ಚೇರಮನ ಕೆಳಕರ ವಿದ್ಯಾಸಂಸ್ಥೆಯ ಎಲ್ಲ ರೆಜಿಷ್ಟರಗಳನ್ನು ಧಾರವಾಡದಲ್ಲಿ ತೆಗೆದುಕೊಂಡು ಹೋಗಿರುತ್ತಾರೆ.

ದೋ ಪಟ್ಟಿಯ ಜೊತೆ ಸಲ್ಲಿಸಿದ ಎಲ್ಲ ದಾಖಲಾತಿಗಳು ಕನ್ನಡ ಭಾಷೆಯಲ್ಲಿರುತ್ತವೆ ಎಂದರೆ ಸರಿ. ಕೆಳಕರ ವಿದ್ಯಾಸಂಸ್ಥೆಗೆ ಸೇರಿದ ಎಲ್ಲ ಕ್ಯಾಶ ರೆಜಿಷ್ಟರಗಳನ್ನು ದಿಃ 10.12.2011 ರಂದು ಚಾಸಾ 11 ರವರ ಸಮಕ್ಷಮ ಅಮಾನತುಪಡಿಸಿಕೊಂಡಿರುತ್ತಾರೆಂದರೆ ಸರಿ. ಚಾಸಾ 11 ರವರು ಕೆಳಕರ ವಿದ್ಯಾಸಂಸ್ಥೆಯ ಹೆಚ್ ಎಮ್ ಆಗಿರುತ್ತಾರೆ. ಚಾಸಾ 11 ಮತ್ತು ಆರೋಪಿತರ ನಡುವೆ ಜಗಳವಾಗಿರುತ್ತದೆ ಎಂದರೆ ಸರಿ. ಚಾಸಾ 11 ರವರು ಬಲಭೀಮ ವಿದ್ಯಾಪ್ರಸಾರಕ ಸಮೀತಿ ಕುಲಗೋಡ ಚೇರಮನ ಮತ್ತು ವೈಸ್ ಚೇರಮನ ಮಾತು ಕೇಳುತ್ತಾರೆಂದರೆ ಸರಿ. ಈ ಹಿನ್ನೆಲೆಯಲ್ಲಿ ಬಲಭೀಮ ವಿದ್ಯಾಪ್ರಸಾರಕ ಸಮೀತಿ ಕುಲಗೋಡ ಚೇರಮನ ಮತ್ತು ವೈಸ್ ಚೇರಮನರವರು ಸೇರಿಕೊಂಡು ಚಾಸಾ 11 ರವರನ್ನು ಕೇಳಕರ ವಿದ್ಯಾಸಂಸ್ಥೆಯ ಹೆಚ ಎಮ್ ಮಾಡಿದ್ದರಿಂದ ಇದನ್ನು ಪ್ರಶ್ನಿಸಿ ಆರೋಪಿ ಬೆಂಗಳೂರು ಕೆ ಇ ಎ ಟಿ ಯಲ್ಲಿ ಮೇಲ್ಮನವಿ ಸಲ್ಲಿದ್ದರು ಎಂದರೆ ಸರಿ. ನಾನು ನಮ್ಮ ಸಂಸ್ಥೆಯ 2003-04 ರಿಂದ 2010-11 ರವರೆಗಿನ ಆಡಿಟ್ ರಿಪೋರ್ಟಗಳನ್ನು ನೋಡಿರುವುದಿಲ್ಲ. ವಿಜಯ ಪಂಚಪ್ಪ ಆಡಿಟ್ ಕಂಪನಿ ಬಗ್ಗೆ ನಾನು ವಿಚಾರಿಸಿರುವುದಿಲ್ಲ.

ನನ್ನ ಸಾಕ್ಷಿ ಮುಖ್ಯ ವಿಚಾರಣೆಯಲ್ಲಿ 2010-11 ನೇ ಆಡಿಟ್ ರಿಪೋರ್ಟನಲ್ಲಿ ಆರೋಪಿ 2008 ರಿಂದ 2011 ರವರೆಗಿನ ಒಟ್ಟು ರೂ. 1,71,000/- ಹಣ ದುರುಪಯೋಗ ಪಡಿಸಿಕೊಂಡಿರುತ್ತಾರೆಂದು ಹೇಳಿದ್ದು ಇದನ್ನು ನನಗೆ ಸಂಸ್ಥೆಯ ಚೇರಮನ ಹೇಳಿರುತ್ತಾರೆ. ನಮ್ಮ ಸಂಸ್ಥೆಯ ಆಡಿಟ್ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿ.

ಬಲಭೀಮ ವಿದ್ಯಾಪ್ರಸಾರಕ ಸಮೀತಿ ಕುಲಗೋಡ ಸಂಸ್ಥೆಯು MOA ಹೊಂದಿದ್ದು ಸದರಿ MOA ಪ್ರಕಾರ ಸಂಸ್ಥೆಯ ಎಲ್ಲ ಹಣಕಾಸಿನ ವ್ಯವಹಾರಗಳನ್ನು ಮತ್ತು ಸಂಬಂಧಿಸಿದ ರೆಜಿಷ್ಟರಗಳನ್ನು ನೋಡಿಕೊಳ್ಳುವ ಜವಾಬ್ದಾರಿ ಸ್ಕ್ರೇಟರಿ ಮೇಲೆ ಇರುತ್ತದೆ ಎಂದರೆ ಸರಿ. ನಮ್ಮ ಸಂಸ್ಥೆಯ ಸ್ಕ್ರೇಟರಿ ಚಾಸಾ 6 ಎಂದರೆ ಸರಿ. ಚಾಸಾ

6 ನಮ್ಮ ಸಂಸ್ಥೆಯ ಹಣಕಾಸಿನ ವ್ಯವಹಾರ ಮತ್ತು ರಜಿಸ್ಟರಗಳನ್ನು ಮೆಂಟೇನ ಮಾಡಿದ್ದು ಅದನ್ನು ನಾನು ನೋಡಿರುತ್ತೇನೆ. ನಮ್ಮ ಸಂಸ್ಥೆಯ ಸೆಕ್ರೆಟರಿ ಮೆಂಟೇನ ಮಾಡಿದ ಹಣಕಾಸಿನ ವ್ಯವಹಾರ ಮತ್ತು ರಜಿಸ್ಟರಗಳ ಆಡಿಟ್ ಮಾಡಿಸುವ ಬಗ್ಗೆ ನನಗೆ ನೆನಪಿರುವುದಿಲ್ಲ. ಪ್ರಸ್ತುತ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ನಮ್ಮ ಸಂಸ್ಥೆಯ ಚೇರಮನ ಮತ್ತು ವೈಸ್ ಚೇರಮನ ಮಾತು ಕೇಳಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿ ನಮ್ಮ ಸಂಸ್ಥೆಯ ಎಲ್ಲ ವರ್ಷದ ಹಣಕಾಸಿನ ವ್ಯವಹಾರಗಳನ್ನು ಪಿ ಜಿ ಗಾಳಿ ಇವರಿಂದ ಆಡಿಟ್ ಮಾಡಿಸಿ ಎಲ್ಲ ದಾಖಲಾತಿಗಳನ್ನು ಮೆಂಟೇನ ಮಾಡಿರುತ್ತಾರೆಂದರೆ ಸರಿ.

2003 ರಲ್ಲಿ ಆರೋಪಿ ನಮ್ಮ ಶಾಲೆಯ ಮುಖ್ಯ ಉಪಾದ್ಯಾಯರಾಗಿದ್ದು, 2003 ರಿಂದ ಆರೋಪಿ ನಮ್ಮ ಶಾಲೆಯ ಮಕ್ಕಳ fees ಹಣವನ್ನು ದುರುಪಯೋಗ ಪಡಿಸಿಕೊಂಡಿರುವ ಬಗ್ಗೆ 2010 ರಲ್ಲಿ ಸಂಸ್ಥೆಯ ಆಡಿಟ್ ನ್ನು ವಿಜಯ ಪಂಚಪ್ಪ ಅವರ ಕಡೆಯಿಂದ ಮಾಡಿಸಿದಾಗ ತಿಳಿದುಬಂದಿರುತ್ತದೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿ 2008 ರಿಂದ 2011 ರ ವರೆಗಿನ ಒಟ್ಟು ಹಣ 1,71,000/- ಹಣ ದುರುಪಯೋಗಪಡಿಸಿಕೊಂಡಿರುತ್ತಾನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ದೂರು ದಾಖಲಿಸಿದ ನಂತರ ಒಟ್ಟು ಮೂರು ಸಲ ಆರೋಪಿ ಒಟ್ಟು 39,000/- ರೂ. ಹಣವನ್ನು ವಾಪಾಸ ನೀಡಿರುತ್ತಾನೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ರೂ. 1,33,271/- (something) ಹಣ ಆರೋಪಿಯಿಂದ ದುರುಪಯೋಗವಾಗಿರುತ್ತದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಈ ಬಗ್ಗೆ ನಾನು ತನಿಖಾಧಿರಿಗೆ ಹೇಳಿಕೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ಯಾವುದೇ ತಪ್ಪು ಮಾಡದೇ ಇದ್ದರೂ ಸಹ ನಮ್ಮ ಸಂಸ್ಥೆಯ ಚೇರಮನ ಮತ್ತು ವೈಸ ಚೇರಮನ ಮಾತು ಕೇಳಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

ಗಣಕೀಕರಿಸಿ ಓದಿ ಹೇಳಿ ಕೇಳಿದಾಗ ಸರಿ ಇದೆ ಎಂದು ಒಪ್ಪಿರುತ್ತಾರೆ.

ಪ್ರ. ದ. ನ್ಯಾ. ದಂ.,
ಮೂಡಲಗಿ.